**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ-46/2015**

(ಪ್ರಾ.ಸಾ- 18 ಚಾ.ಸಾ.-23)

ತಾಃ 11-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಬಸವರಾಜು ಎಂ |
| ತಂದೆಯ ಹೆಸರು | ಃ | ಮೂರ್ತಪ್ಪ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಪೋಲೀಸ್ ಪೇದೆ (ಪಿ.ಸಿ 841) ದಾಬಸ್‌ಪೇಟೆ ಪೋಲೀಸ್ ಠಾಣೆ |
| ವಾಸ ಸ್ಥಳ | ಃ | ದಾಬಸ್‌ಪೇಟೆ, ನೆಲಮಂಗಲ ತಾಲ್ಲೂಕು |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ ಆರು ವರ್ಷಗಳಿಂದ ದಾಬಸ್‌ಪೇಟೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 03.05.2014 ರಂದು ಚಾ.ಸಾ-27 ನೆಲಮಂಗಲ ವೃತ್ತ ನಿರೀಕ್ಷಕರು ಈ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡ ಒಟ್ಟು ಹನ್ನೆರೆಡು ಪ್ರತ್ಯೇಕವಾಗಿ ಸೀಲ್ ಮಾಡಿ ಮೊಹರು ಹಾಕಿದ ವಸ್ತುಗಳನ್ನು ಎಫ್ ಎಸ್ ಎಲ್, ಮಡಿವಾಳ, ಬೆಂಗಳೂರಿಗೆ ತಲುಪಿಸಲು ಕೊಟ್ಟಿದ್ದರು. ನಾನು ಡಿ.ವೈ.ಎಸ್.ಪಿರವರ ಸಹಿಯನ್ನು ಪಡೆದುಕೊಂಡು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಸದರಿ ವಸ್ತುಗಳನ್ನು

ಎಫ್.ಎಸ್.ಎಲ್ ಮಡಿವಾಳ, ಬೆಂಗಳೂರು ಇವರಿಗೆ ದಿನಾಂಕ 05.05.2014 ರಂದು ತಲುಪಿಸಿ ಅವರಿಂದ ಸ್ವೀಕೃತಿ ಪತ್ರ ಪಡೆದುಕೊಂಡು ಬಂದು ಚಾ.ಸಾ–27 ರವರ ಮುಂದೆ ಹಾಜರುಪಡಿಸಿದೆನು.

**ಪಾಟೀ ಸವಾಲುಃ 1, 4, 5 ಆರೋಪಿತರ ಪರ ಜಿ ಎಸ್ ಬಿ ವಕೀಲರಿಂದ ಃ**

ಸೀಲಾದ ವಸ್ತುಗಳನ್ನು ಎಫ್ ಎಸ್ ಎಲ್‌ಗೆ ತಲುಪಿಸಿ ಬರಲು ನನಗೆ ಪಾಸ್ ಪೋರ್ಟ್ ಕೊಟ್ಟಿದ್ದರು. ಪ್ರತ್ಯೇಕ ಆದೇಶ ನೀಡಿರಲಿಲ್ಲ. ಪಾಸ್‌ಪೋರ್ಟ್‌ಗೆ ಎಫ್ ಎಸ್ ಎಲ್‌ನವರ ಸಹಿ ಪಡೆದು ಚಾ.ಸಾ–27 ರವರಿಗೆ ಒಪ್ಪಿಸಿದ್ದೇನೆ. ಚಾ.ಸಾ-27 ರವರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಪಾಸ್‌ಪೋರ್ಟ್ ಬಗೆಗೆ ಹೇಳಿಲ್ಲ. ಸೀಲಾದ ವಸ್ತುಗಳೊಂದಿಗೆ ದಾಖಲಾತಿಗಳನ್ನೂ ಸಹ ಎಫ್ ಎಸ್ ಎಲ್‌ಗೆ ಕೊಟ್ಟಿದ್ದೆನು ಅಂತ ನನ್ನ ಹೇಳಿಕೆಯಲ್ಲಿ ನಮೂದಿಸಿಲ್ಲ. ಡಿ ವೈ ಎಸ್ ಪಿ ರವರ ಸಹಿ ಆಗುವವರಗೆ ಸೀಲ್ ಮಾಡಿದ ವಸ್ತುಗಳನ್ನು ಠಾಣೆಯಲ್ಲಿಯೇ ಇಟ್ಟಿದ್ದೆನು. ಈ ಸಂಗತಿಯನ್ನು ಚಾ.ಸಾ-27 ರವರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ. ಸದರಿ ಸೀಲಾದ ವಸ್ತುಗಳನ್ನು ರೈಟರ್ ಕಸ್ಟಡಿಯಲ್ಲಿಯೇ ಇಟ್ಟಿದ್ದೆನು. ಈ ಸಂಗತಿಯನ್ನು ಸಹ ಚಾ.ಸಾ-27 ರವರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ.

ನಾನು ಎಫ್.ಎಸ್.ಎಲ್‌ಗೆ ಹೋಗಿ ಯಾವುದೇ ವಸ್ತುಗಳನ್ನು ತಲುಪಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಾ.ಸಾ-27 ರವರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2ನೇ ಆರೋಪಿ ಪರ ಶ್ರೀ ವಿ ವಿ ಎಸ್ ವಕೀಲರಿಂದಃ-**

ಸೀಲಾದ ವಸ್ತುಗಳನ್ನು ನನಗೆ ದಿನಾಂಕ 03.05.2014 ರಂದು ನನಗೆ ಕೊಟ್ಟಿದ್ದರು. ದಿನಾಂಕ 27.04.2014 ರಂದು ನಾನು ಚಾ.ಸಾ-27 ರವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ನನಗೆ ನೆನಪಿಲ್ಲ. ನಾನು ನನ್ನ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳನ್ನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 6ನೇ ಆರೋಪಿ ಪರ ಶ್ರೀ ಎಸ್ ವೈ ವಕೀಲರಿಂದಃ-**

**(6ನೇ ಆರೋಪಿ ಪರ ವಕೀಲರು 1, 4 ಮತ್ತು 5 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಂತೆಯೇ 6ನೇ ಆರೋಪಿ ಪರ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೇಳಿಕೊಂಡಿರುತ್ತಾರೆ.)**

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.